
ರಾಷ್ಟ್ರವನ್ನು ಅದರ ವ್ಯಾಪ್ತಿಯಲ್ಲಿ ಒಟ್ಟುಗೂಡಿಸುವ ಹೊತ್ತಿನಲ್ಲೇ ಹೇಗೆ ಅನೇಕ ಸಾಮಾಜಿಕ ಗುಂಪುಗಳನ್ನು ರಾಷ್ಟ್ರದ ಮಡಿಕೆಯಿಂದ ಹೊರಗಿಡುವುದನ್ನು ಮುಂದುವರಿಸುತ್ತಾ ಬರಲಾಗಿದೆ ಎಂಬುದನ್ನು ಅವರು ಮನಗಂಡಿದ್ದರು. ತಾತ್ವಿಕ ವಿವೇಚನೆಯಿಲ್ಲದೆ ಪಠ್ಯಗಳ ವ್ಯಾಖ್ಯಾನಗಳಿಗಿಳಿಯುವ, ಉದಾಹರಣೆಗೆ, ಬ್ರಾಹ್ಮಣವಾದವನ್ನು ಖಂಡಿಸಿದ ಅಯೋತಿ ಥಾಸ್ ಅಥವಾ ಆದಿ ಧರ್ಮಿಗಳಂತಹವರ ಪ್ರಯತ್ನಗಳು, ಅವು ಇನ್ನೆಷ್ಟೇ ವಿಮೋಚನಾತ್ಮಕವೆನಿಸಿದರೂ ಹೊಸ ಪಂಥಗಳನ್ನು ಹುಟ್ಟುಹಾಕಬಹುದೇ ಹೊರತು, ಏಕೀಕೃತವಾದ ರಾಜಕೀಯ ಸಮುದಾಯವೊಂದನ್ನು ಸೃಷ್ಟಿಸಲಾರವು ಎಂದು ಅವರು ಭಾವಿಸಿದ್ದರು.

◆ **ಅಂಬೇಡ್ಕರ್-ಗಾಂಧಿ ಚರ್ಚೆಗೆ ಬರುವಾಗ, ನಿಮ್ಮ ತಲೆಮಾರಿನ ಹೆಚ್ಚಿನವರ ವಿದ್ವತ್ತು ಗಾಂಧಿಯವರ ಮೇಲೆ ಆಳವಾಗಿ ಕೇಂದ್ರೀಕೃತವಾಗಿದ್ದರೂ, ನೀವು ಬೇರೆಯದೇ ಹಾದಿಯನ್ನು ಆರಿಸಿಕೊಂಡಿದ್ದೀರಿ - ಅದು ಈಗ ಕ್ರಿಟಿಕಲ್ ಅಂಬೇಡ್ಕರ್ ಸ್ಟಡೀಸ್ ಚಳವಳಿಯನ್ನು ಗಮನಾರ್ಹವಾಗಿ ರೂಪಿಸಿದೆ ಕೂಡ. ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಅಂಬೇಡ್ಕರ್ ಅಧ್ಯಯನದಲ್ಲಿ ತೊಡಗಿಸಿಕೊಂಡಿರುವ ನಿಮಗೆ ಅಂಬೇಡ್ಕರ್-ಗಾಂಧಿ ಚರ್ಚೆಯು ನ್ಯಾಯ, ಜನಾಳ್ವಿಕೆ ಹಾಗೂ ಸಾಮಾಜಿಕ ಪರಿವರ್ತನೆ ಕುರಿತ ನಮ್ಮ ತಿಳಿವಳಿಕೆಯನ್ನು ಹೇಗೆ ಪ್ರಶ್ನಿಸುತ್ತಿದೆ ಹಾಗೂ ಮರುವ್ಯಾಖ್ಯಾನಿಸುತ್ತಿದೆ ಎಂದೆನಿಸುತ್ತದೆ?**



ಸ್ವಾತಂತ್ರ್ಯದ ನಂತರದ ಮೊದಲ ನಾಲ್ಕು ದಶಕಗಳಲ್ಲಿ ಅಕಡೆಮಿಕ್ ಚರ್ಚೆಯಲ್ಲಿ ಪ್ರಾಬಲ್ಯ ಸಾಧಿಸಿದ ಗಾಂಧಿಯವರ ಎರಡು ಆವೃತ್ತಿಗಳ ನಡುವೆ ವ್ಯತ್ಯಾಸವನ್ನು ಕಂಡುಹಿಡಿಯುವುದು ಇಲ್ಲಿ ಮುಖ್ಯವಾಗಬಹುದು: ಮೊದಲನೆಯದು, ವಸಾಹತುಶಾಹಿ ಆಳ್ವಿಕೆಯ ವಿರುದ್ಧ ರಾಷ್ಟ್ರೀಯ ಚಳವಳಿಯನ್ನು ಮುನ್ನಡೆಸುವ ಉದ್ದೇಶಕ್ಕಾಗಿ ವಿಭಿನ್ನ ಸಾಧನಗಳನ್ನು ರೂಪಿಸಿದ ಗಾಂಧಿ; ಎರಡನೆಯದು, ರಾಷ್ಟ್ರದ ಜನರ ಏಕತೆ ಮತ್ತು ನೈತಿಕ ನಿಲುವಿನ ಸಂಕೇತವಾದ ಗಾಂಧಿ. ಆದಾಗ್ಯೂ, ಅಕಡೆಮಿಕ್ ಚರ್ಚೆಗೆ ಕೇಂದ್ರವೆನಿಸಿದ 'ಭೇದ'ದ ಮೇಲೆ ಒತ್ತು ನೀಡುವುದರೊಂದಿಗೆ, ಗಾಂಧಿಯವರು ದೃಢತೆಯ ಸಾಕಾರ, ಭಾರತದ ವಿಶಿಷ್ಟ ಗುರುತಾಗಿ ಹೊರಹೊಮ್ಮಿದರು. ಹೆಚ್ಚಿನ ಸಬಾಲ್ಟರ್ನ್ ಇತಿಹಾಸಶಾಸ್ತ್ರವು ಗಾಂಧಿಯವರನ್ನು ಆ ಮನೋಧರ್ಮದ ಮೂಲಕ ನೋಡುತ್ತದೆ.

ಅಂಬೇಡ್ಕರ್‌ರವರು ಭಾರತದಲ್ಲಿನ ಸಂಕೀರ್ಣ ಸಾಮಾಜಿಕ ರಚನೆಯನ್ನು ಗಮನದಲ್ಲಿಟ್ಟುಕೊಂಡು ಅದರ ಅಂಚುಗಳಿಂದ ಮಾತನಾಡುತ್ತಿದ್ದಾರೆ ಎಂದು ನಾನು ಪರಿಗಣಿಸುತ್ತೇನೆ. ಹಾಗೆಂದು ಹೇಳಿಕೊಳ್ಳುವ ಮೂಲಕ, ಅವರು ತಮ್ಮನ್ನು ತಾವು ಎಲ್ಲರಿಗೂ ಸಲ್ಲುವವರು ಎಂದು ಘೋಷಿಸಿಕೊಳ್ಳಲು ಹೋಗುವುದಿಲ್ಲ. ಬದಲಿಗೆ, ಅವರು ನಾವು ನಮ್ಮ ಗತಕಾಲವನ್ನು ಆಯ್ದುಕೊಂಡು ನಮ್ಮ ಭವಿಷ್ಯಕ್ಕಾಗಿ ನಾವು ತುಳಿಯಬೇಕಾದ ಹಾದಿಯನ್ನು ನಿರ್ಧರಿಸಿಕೊಳ್ಳಲು ಕರೆ ನೀಡುತ್ತಾರೆ. ಅದೇ ಕಾಲಕ್ಕೆ ಅವರು ಆಮೂಲಾಗ್ರ ಸಾಮಾಜಿಕ ಪರಿವರ್ತನೆಗೆ ಅಗತ್ಯವಾದ ಪೂರ್ವಭಾವಿಯಾಗಿ 'ಭೇದ'ವನ್ನು ಪರಿಗಣಿಸುತ್ತಾರೆ. ನೀವು ಭೇದಗಳನ್ನು ಪರಿಗಣಿಸದಿದ್ದರೆ, ಸಾಮಾಜಿಕ ಪರಿವರ್ತನೆಯ ಹಕ್ಕೊತ್ತಾಯ ಕೇವಲ ಪೊಳ್ಳು ವಾದವಾಗುತ್ತದೆ. ಅಂತಹ ಅನ್ವೇಷಣೆಗೆ ಜನಾಳ್ವಿಕೆಯು ಅತ್ಯಗತ್ಯ ಪೂರ್ವಭಾವಿ ಸ್ಥಿತಿ ಎಂದು ಅಂಬೇಡ್ಕರ್‌ರವರು ಭಾವಿಸುತ್ತಾರೆ. ಆದ್ದರಿಂದ ಅವರಿಬ್ಬರ ನಡುವೆ ನಿಕಟ ಸ್ಪರ್ಧೆ ಏಕೆ ಇದೆ ಎಂದು ನೀವು ಅರ್ಥಮಾಡಿಕೊಳ್ಳಬಹುದು.